# ಬುದ್ಧ ಮತ್ತು ಬಸವಣ್ಣನ ದೃಷ್ಟಿಕೋನ: ಮಹಿಳೆ

**ಅರುಣ್ ಕುಮಾರ್ ಎ.ವೈ.[1] & ಶಿವಕುಮಾರ ಡಿ.ಸಿ.[2]**

[1]ಸಂಶೋಧನಾರ್ಥಿ, ಕನ್ನಡ ವಿಭಾಗ, ಜೈನ್ ಡೀಮ್ಡ್ ಟು – ಬಿ ವಿಶ್ವ ವಿದ್ಯಾಲಯ, ಬೆಂಗಳೂರು.

[2]ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಜೈನ್ ಡೀಮ್ಡ್ ಟು – ಬಿ ವಿಶ್ವ ವಿದ್ಯಾಲಯ, ಬೆಂಗಳೂರು.

DOI: https://doi.org/10.5281/zenodo.17773488

## ABSTRACT:

ಭಾರತೀಯ ದಾರ್ಶನೀಕ ಪರಂಪರೆಯಲ್ಲಿ ಬುದ್ಧ ಮತ್ತು ಬಸವಣ್ಣ ಈ ಇಬ್ಬರನ್ನು ಮಹಾನ್ ಸಮಾಜವಾದಿಗಳನ್ನಾಗಿ ಗುರುತಿಸಲಾಗಿದೆ. ಈ ಇಬ್ಬರಲ್ಲೂ ಕೂಡ ಹಳೆಯ ಮೌಢ್ಯಗಳ, ಆಚರಣೆಗಳ ವಿರುದ್ಧ ಧ್ವನಿ ಎತ್ತುವ ಗುಣವಿತ್ತು. ವಿಶಿಷ್ಟವಾಗಿ ಕಾಣುವುದಾದರೆ ಈ ಇಬ್ಬರಲ್ಲೂ ಸಮಾನತೆಯ ಕುರಿತಾದ ದೃಷ್ಟಿಯೂ ಹೆಚ್ಚು ಪ್ರಗತಿಪರವಾಗಿದ್ದವೂ. ಈ ಹಿನ್ನೆಲೆಯಲ್ಲಿ ಮಹಿಳೆಯ ಕುರಿತಾದ ದೃಷ್ಟಿಕೋನವು ಹೆಚ್ಚು ಮಹತ್ವ ಉಳ್ಳದ್ದಾಗಿದೆ. ಈ ಮೂಲಕ ಮಹಿಳೆಯ ಕುರಿತಾದ ಹಳೆಯ ಆಲೋಚನೆಗಳನ್ನು ದಿಕ್ಕರಿಸುವ ಮುಖೇನ ಸ್ತ್ರೀಗೆ ಸಾಮಾಜಿಕ, ರಾಜಕೀಯ, ಧಾರ್ಮಿಕ ಭಾಗವಾಗಿಯೂ ಆಕೆಯನ್ನು ಸಮಾನವಾಗಿ ಕಾಣುವ ದೃಷ್ಟಿಯನ್ನು ಬುದ್ಧ ಮತ್ತು ಬಸವಣ್ಣನ ತಾತ್ವಿಕತೆಯ ಮೂಲಕ ಅರಿಯಬಹುದಾಗಿದೆ.

ಪ್ರಸ್ತುತ ಈ ಲೇಖನದಲ್ಲಿ ಬುದ್ಧ ಮತ್ತು ಬಸವಣ್ಣನ ವಿಚಾರಧಾರೆಗಳನ್ನು ಅವಲೋಕಿಸುವ ಮೂಲಕ ಬುದ್ಧ ಮತ್ತು ಬಸವಣ್ಣನ ದೃಷ್ಟಿಕೋನದಲ್ಲಿ ಮಹಿಳೆಯ ಕುರಿತಾದ ಪ್ರಗತಿಪರ ವಿಚಾರಗಳನ್ನು ಕನ್ನಡ ಸಾಹಿತ್ಯದಲ್ಲಿ ಒಳಗೊಂಡಿರುವುದನ್ನು ತಿಳಿಸುವುದಾಗಿದೆ. ಹಾಗಾಗಿ ಬುದ್ಧನ ಮತ್ತು ಬಸವಣ್ಣನ ಸ್ತ್ರೀ ಕುರಿತ ಆಲೋಚನೆಗಳು ಪ್ರಸ್ತುತಕ್ಕೂ ಅವು ಸ್ಪಂದಿಸುವ ಮತ್ತು ಪ್ರಗತಿಪರವಾದ ಆಶಯಗಳನ್ನು ಹೊಂದಿರುವುದನ್ನು ಕಾಣಬಹುದಾಗಿದೆ.

## KEYWORDS:

ಬುದ್ಧ, ಬಸವಣ್ಣ, ಮಹಿಳೆ, ಕನ್ನಡ ಸಾಹಿತ್ಯ, ಚಿಂತನೆ.

ಬುದ್ಧನು ಅಂಧಕಾರದಲ್ಲಿ ಮುಳುಗಿದ್ದ ಭಾರತವನ್ನು ತನ್ನ ತತ್ವ ಚಿಂತನೆಗಳಿಂದ ಬೆಳಕಿನೆಡೆಗೆ ತರಲು ಯತ್ನಿಸಿದ. ಈ ಮೂಲಕ ಮೌಢ್ಯ, ಅಸಮಾನತೆ, ಶೋಷಣೆ, ಇವೆಲ್ಲವುಗಳನ್ನು ಬೇರು ಸಮೇತವಾಗಿ ಕಿತ್ತೆಸೆಯಲು ಯತ್ನಿಸಿದ. ಈ ವಿಚಾರವಾಗಿ ಸ್ತ್ರೀ ಕುರಿತಾದ ಶೋಷಣೆಯನ್ನು ಬಲವಾಗಿ ಖಂಡಿಸುವ ಮೂಲಕ ಸ್ತ್ರೀಯೂ ಪುರುಷನಷ್ಟೆ ಸಮಾನಳು ಎಂಬ ವಿಚಾರವನ್ನು ಸಾರಿದ. ಇದಕ್ಕೆ ಪೂರಕವಾಗಿ ಬುದ್ಧನು ತಾನು ಸಂಘವನ್ನು ಸ್ಥಾಪಿಸುವ ಮೊದಲು ಭಾರತದಲ್ಲಿ ಮಹಿಳೆಯರ ಸ್ಥಿತಿಗತಿಗಳು ತೀರ ಶೋಚನೀಯವಾಗಿತ್ತು. ಮಹಿಳೆಯರು ಧಾರ್ಮಿಕ, ಸಾಮಾಜಿಕ, ರಾಜಕೀಯ ಸ್ವಾತಂತ್ರ್ಯಗಳನ್ನು ಕಳೆದುಕೊಂಡಿದ್ದರು.

ಆನಂತರದಲ್ಲಿ ಬುದ್ಧನು ತನ್ನ ಸಂಘವ್ಯವಸ್ಥೆಯಲ್ಲಿ ಸ್ತ್ರೀಯರಿಗೆ ಪ್ರವೇಶ ನೀಡ ಬೇಕೋ, ಬೇಡವೋ, ಎಂಬ ಪ್ರಶ್ನೆಯೂ ಎದುರಾದಾಗ ಬುದ್ಧನು ಅದಕ್ಕೆ ಆರೋಗ್ಯಕರವಾಗಿಯೇ ಪ್ರತಿಕ್ರಿಯಿಸಿದ್ದಾನೆ. ಈ ಹಿನ್ನೆಲೆಯಲ್ಲಿ ಬುದ್ಧನ ಸಂಘವನ್ನು ಸೇರಲು ಮೊದಲಾಗಿ ಮಹಿಳೆಯರೇ ಕೇಳಿಕೊಂಡಿದ್ದರೆಂಬುದನ್ನು ಅಧ್ಯಯನಗಳ ಮೂಲಕ ವಿದ್ವಾಂಸರು ಸ್ಪಷ್ಟಪಡಿಸುತ್ತಾರೆ. ಹೀಗಾಗಿ ಬುದ್ಧನು ಕೂಡ ಪುರುಷ ಪ್ರಧಾನ ಕುಟುಂಬದಿಂದ ಬಂದಿದ್ದರು ಕೂಡ ಬುದ್ಧನು ಮಹಿಳೆಯರನ್ನು ನೋಡುವ ದೃಷ್ಟಿಯೇ ವಿಭಿನ್ನವಾಗಿತ್ತು ಇದಕ್ಕೆ ಉದಾ: ತನ್ನ ಚಿಕ್ಕಮ್ಮನಾದ ಪ್ರಜಾಪತಿ ಗೋತಮಿಯನ್ನು ತನ್ನ ಸಂಘಕ್ಕೆ ಮೊದಲ ಪ್ರವೇಶವನ್ನು ನೀಡಿದ್ದನ್ನು ತಿಳಿಯಬಹುದಾಗಿದೆ.

ಈ ಮೂಲಕ ಬೌದ್ಧಧರ್ಮದಲ್ಲಿ ಮಹಿಳೆಗೆ ಸಮಾನತೆಯನ್ನು ನೀಡಲಾಗಿದ್ದು, ಈ ಕುರಿತಂತೆ ಡಾ.ಜಯದೇವಿ ಗಾಯಕವಾಡ ಅವರು 'ಬುದ್ಧಜನಿಸಿದ ಭೂಮಿಯು ಪುಣ್ಯಭೂಮಿಯಾಗಿದೆ' ಎಂದು ಹೇಳುತ್ತಾರೆ. ಕಾರಣ ಬುದ್ಧನು ಮಹಿಳೆಯರಿಗೆ ದೊರಕಬೇಕಾದ ಹಕ್ಕುಗಳು ಮತ್ತು ಸಮಾನತೆಯನ್ನು ಕುರಿತು ಪ್ರತಿಪಾದಿಸಿದ್ದಾನೆ ಹಾಗೂ ಅವುಗಳಿಗಾಗಿ ಧ್ವನಿಯನ್ನು ಕೂಡ ಎತ್ತಿದ್ದಾನೆ. ಹೀಗಾಗಿಯೇ ಬುದ್ಧನ ಕಾಲದ ಆಮ್ರಪಾಲಿಯ ಕುರಿತು ಸಮಾಜ ಏನನ್ನೇ ಹೇಳಿದರು ಬುದ್ಧನು ಆಮ್ರಪಾಲಿಯ ಕುರಿತ ಭಾವನೆ ಮತ್ತು ವಿಚಾರಗಳು ಸ್ತ್ರೀಪರವಾಗಿದ್ದವೂ ಎಂಬುದು ಅಧ್ಯಯನದ ಮೂಲಕ ಅರಿಯಬಹುದಾಗಿದೆ. ಹೀಗಾಗಿ ಜಗತ್ತಿನಲ್ಲಿ ಅದೆಷ್ಟೋ ಧರ್ಮಗಳು ಉದಯಿಸಿದ್ದರೂ ಕೂಡ ಆ ಧರ್ಮಗಳು ಸ್ತ್ರೀಯನ್ನು ಉನ್ನತ ಸ್ಥಾನದಲ್ಲಿರಿಸದೆ ಆಕೆಯನ್ನು ಸಂಪ್ರದಾಯದ ಹೆಸರಿನಲ್ಲಿ ಶೋಷಿಸಲಾಗಿತ್ತು. ಬದಲಾಗಿ ಮಹಿಳೆಯೂ ಉನ್ನತ ಮಟ್ಟವನ್ನು ತಲುಪಲು ಹಾಗೂ ಸಮಾನತೆಯನ್ನು ಪಡೆದುಕೊಳ್ಳಲು ಬೌದ್ಧಧಮ್ಮವೇ ಉದಯಿಸಬೇಕಾಯಿತು.

ಬುದ್ಧನ ಕಾಲಮಾನದ ಸಮಾಜದಲ್ಲಿ ಮಹಿಳೆಯ ಪಾತ್ರವನ್ನು ಶೈಲಜಾ ರವರು ಬರೆದ 'ಥೇರಿಗಾಥ ಕಾಣಿಸಿದ ಹೆಣ್ಣು ಬೌದ್ಧ ಧರ್ಮದಲ್ಲಿ ಮಹಿಳೆ' ಎಂಬ ಈ ಕೃತಿಯೂ ಬುದ್ಧನ ಕಾಲದ ಮಹಿಳೆಯರ ಕುರಿತು ತಿಳಿಸುತ್ತದೆ. ಥೇರವಾದ ಎಂದರೆ

ಬೌದ್ಧಧಮ್ಮದ ಹಳೆಯ ಶಾಖೆಯಾಗಿದ್ದು, ಇದು ಬುದ್ಧನ ಚಿಂತನೆಗಳಿಗೆ ತೀರ ಹತ್ತಿರವಾಗಿದೆ. ಇದು ಪ್ರಮುಖವಾಗಿ ಬೌದ್ಧ ಬಿಕ್ಕುಣಿಯರ ಕುರಿತಾದ ಕೃತಿಯಾಗಿದ್ದು, ಬುದ್ಧನು ತನ್ನ ಕಾಲದ ಸ್ತ್ರೀಯರ ಜೊತೆಗೆ ನಡೆಸಿದ ಅನುಸಂಧಾನವನ್ನು ಕುರಿತು ಚರ್ಚಿಸುತ್ತದೆ.

ಈ ಹಿನ್ನೆಲೆಯೊಳಗೆ ಬುದ್ಧನು ಸಾರಿದ ಸಮಾನತೆ ತತ್ವವೂ ಕೇವಲ ಜಾತಿ, ಧರ್ಮ, ಇವುಗಳಿಗಷ್ಟೆ ಸೀಮಿತವಾಗಿರದೆ ಅದು ಲಿಂಗಸಮಾನತೆಗೂ ಅನ್ವಯಗೊಳ್ಳುವುದಾಗಿತ್ತು. ಇಂದು ಜಾಗತೀಕರಣದ ಈ ಸಂದರ್ಭದಲ್ಲಿ ಬುದ್ಧನು ಸಾರಿದಂತಹ ಸ್ತ್ರೀಪರವಾದ ನಿಲುವುಗಳು ತೀರ ಪ್ರಸ್ತುತವಾಗಿವೆ. ಕಾರಣ ಸ್ತ್ರೀಗೆ ಸಂವಿಧಾನ ಹಾಗೂ ಸ್ವಾತಂತ್ರ್ಯ ಇರುವ ಪ್ರಸ್ತುತ ಸಂದರ್ಭದಲ್ಲಿಯೂ ಸ್ತ್ರೀಯ ಮೇಲೆ ಶೋಷಣೆ, ದಬ್ಬಾಳಿಕೆ, ಮೊದಲಾದ ಹಿಂಸಾಚಾರಗಳು ಹೆಚ್ಚಾಗುತ್ತಲೆಯಿವೆ. ಹೀಗಾಗಿ ಮನುಕುಲದ ಒಳಿತಿಗಾಗಿ ಬುದ್ಧಗುರುವು ನೀಡಿದಂತಹ ಮೌಲ್ಯಯುತವಾದ ಚಿಂತನೆಗಳು ಇಂದು ಎದುರುಗೊಳ್ಳಬೇಕಾಗಿದೆ.

ಬುದ್ಧನ ನಂತರದಲ್ಲಿ ಸುಮಾರು 12ನೇ ಶತಮಾನದಲ್ಲಿ ಜೀವಿಸಿದ್ದ ಬಸವಣ್ಣನು ಕೂಡ ಸ್ತ್ರೀಪರವಾದ ಆಶಯಗಳನ್ನು ಹೊಂದಿದ್ದನು. ಇದಕ್ಕೆ ಪ್ರಮುಖವಾಗಿ 12ನೇ ಶತಮಾನದಲ್ಲಿ ಬಸವಣ್ಣನು ಸ್ತ್ರೀಯರ ಸ್ವಾತಂತ್ರ್ಯಕ್ಕಾಗಿ ದನಿ ಎತ್ತಿದ್ದಾನೆ. ಮುಖ್ಯವಾಗಿ ಅಕ್ಕಮಹಾದೇವಿ, ಆಯ್ದಕ್ಕಿ ಲಕ್ಕಮ್ಮ, ಸತ್ಯಕ್ಕ, ನೀಲಾಂಬಿಕೆ, ಸೂಳೆಸಂಕವ್ವ, ಮೊದಲಾದ ಮಹಿಳೆಯರಿಗೆ ಅನುಭವಮಂಟಪದಲ್ಲಿ ಪ್ರಾತಿನಿಧ್ಯವನ್ನು ನೀಡುವ ಮೂಲಕ ಸ್ತ್ರೀಯೂ ಕೂಡ ಪುರುಷನಂತೆಯೇ ಸಮಾನಳೂ ಎಂಬ ಅರಿವನ್ನು ಸಾರಿದ್ದಾನೆ. ಹೀಗಾಗಿ ಬಸವಣ್ಣನ ವಚನಗಳನ್ನು ಗಮನಿಸಿದಂತೆ ರಾಜಕೀಯವಾಗಿ, ಧಾರ್ಮಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ಸ್ತ್ರೀಯರಿಗೆ ಸ್ಥಾನಮಾನವನ್ನು ನೀಡುವುದರ ಮುಖೇನ ಮಹಿಳೆಯರ ಸಬಲೀಕರಣಕ್ಕಾಗಿ ಶ್ರಮಿಸಿದವರಲ್ಲಿ ಅಗ್ರಗಣ್ಯನಾಗಿದ್ದಾನೆ.

**ಜನಿತಕ್ಕೆ ತಾಯಾಗಿ ಹೆತ್ತಳೂ ಮಾಯೆ**
**ಮೋಹಕ್ಕೆ ಮಗಳಾಗಿ ಹುಟ್ಟಿದಳು ಮಾಯೆ**
**ಕೂಟಕ್ಕೆ ಸ್ತ್ರೀಯಾಗಿ ಕೂಡಿದಳು ಮಾಯೆ**
**ಇದಾವ ಪರಿಯಲ್ಲಿ ಕಾಡಿತ್ತು ಮಾಯೆ**
**ನೀವೆ ಬಲ್ಲಿರಿ ಕೂಡಲಸಂಗಮದೇವ**[1]

ಪ್ರಸ್ತುತ ವಚನವು ಗಮನಿಸಿದಂತೆ ಮಹಿಳೆಯನ್ನು ಮಾಯೆಗೆ ಹೋಲಿಸಿದಂತೆ ಕಂಡರೂ ಕೂಡ, ಅನಾದಿಕಾಲದಿಂದ ಹೆಣ್ಣನ್ನು ನೋಡಿಕೊಂಡು ಬಂದ ಬಗೆಯನ್ನು ಪ್ರಸ್ತುತ ವಚನವು ಖಂಡಿಸುತ್ತದೆ. ವೈದಿಕ ಶಾಹಿ ವರ್ಗವು ಹೆಣ್ಣನ್ನು ಮಾಯೆ ಎಂದು ಹುಟ್ಟುಹಾಕಿದ ಪರಿಕಲ್ಪನೆಯನ್ನು ಒಡೆದು ಹಾಕಲಾಗಿದೆ. ಹೆಣ್ಣು ತಾಯಾಗಿ, ಮಗಳಾಗಿ, ಮಡದಿಯಾಗಿ ಜೀವನದಲ್ಲಿ ಕಾರ್ಯನಿರ್ವಹಿಸುವಾಗ ಆಕೆ ಹೇಗೆ ಮಾಯೆ ಯಾಗಲು

ಸಾಧ್ಯವೆಂಬುದನ್ನು ಬಸವಣ್ಣನವರ ಈ ವಚನವು ಪ್ರಶ್ನಿಸುತ್ತದೆ. ಈ ಹಿನ್ನೆಲೆಯಲ್ಲಿ ಬಸವಣ್ಣನ ಸಮಕಾಲೀನರ ವಚನಕಾರರಲ್ಲಿಯೂ ಸ್ತ್ರೀ ಪರವಾದ ವಿಚಾರಗಳನ್ನು ಕಾಣಬಹುದು.

ಸಾಮಾಜಿಕ ಪರಿಸರದಲ್ಲಿ ಸ್ತ್ರೀಗೆ ದೊರಕಬೇಕಾದ ಸ್ವಾತಂತ್ರ್ಯ ಮತ್ತು ಸಮಾನತೆ ಬಸವಣ್ಣನ ಕಾಲಘಟ್ಟದಲ್ಲಿ ಪ್ರಮುಖವಾಗಿ ಗುರುತಿಸಬಹುದಾಗಿದೆ. ಆಕೆ ಕುಟುಂಬದಷ್ಟೆ ಅಲ್ಲದೆ ಎಲ್ಲಾ ರಂಗದಲ್ಲೂ ತನ್ನನ್ನು ತೊಡಗಿಸಿಕೊಳ್ಳುವ ಸಾಮರ್ಥ್ಯವಿದೆ ಎಂಬುದನ್ನು ಬಸವಣ್ಣನ ವಚನಗಳು ಕೂಡ ನಿರೂಪಿಸುತ್ತವೆ.

**ಸತಿ ಪುರುಷರಿಬ್ಬರು ಪ್ರತಿದೃಷ್ಟಿಯಾಗಿ ಮಾಡಬಲ್ಲಡೆ**
**ಅದೆ ಮಾಟ ಕೂಡಲಸಂಗಮ ದೇವರ ಕೂಡುವ ಕೂಟ**[2]

ಸಂಸಾರದಲ್ಲಿ ಪತಿಯಂತೆಯೇ ಸ್ತ್ರೀಯೂ ಕೂಡ ಸಮಾನಳು. ತನ್ನ ಪತಿಯಂತೆಯೇ ಕುಟುಂಬವನ್ನು ನಿಭಾಯಿಸುವ ಸಾಮರ್ಥ್ಯ ಆಕೆಗೆ ಇದೆ. ಸತಿ ಮತ್ತು ಪತಿಯ ಸಂಬಂಧವು ಅನ್ಯೋನ್ಯವಾಗಿದ್ದರೆ ಅವರಿಬ್ಬರ ಬದುಕಲ್ಲಿ ಸಂತೋಷಕ್ಕೆ ಯಾವುದೆ ಅಡೆತಡೆಗಳಿರುವುದಿಲ್ಲ ಎಂಬ ವಿಚಾರವನ್ನು ಈ ಮೇಲಿನ ವಚನವು ನಿರೂಪಿಸುತ್ತದೆ. ಇಲ್ಲಿ ಗಂಡ ಮತ್ತು ಹೆಂಡತಿಯರಿಬ್ಬರಲ್ಲೂ ಸಮಾನತೆ ಇರಬೇಕೆಂಬ ಅಂಶವೂ ಕೂಡ ಇಲ್ಲಿ ಕಾಣಬಹುದಾಗಿದೆ.

**ದಾಸೀಪುತ್ರನಾಗಲಿ, ವೇಶ್ಯಾಪುತ್ರನಾಗಲಿ**
**ಶಿವದೀಕ್ಷೆಯಾದ ಬಳಿಕ ಸಾಕ್ಷಾತ್ ಶಿವನೆಂದು ವಂದಿಸಿ ಪೂಜಿಸಿ**
**ಪಾದೋದಕ ಪ್ರಸಾದವ ಕೊಂಬುದೆ ಯೋಗ್ಯ**
**ಹೀಗಲ್ಲದೆ ಉದಾಸೀನವ ಮಾಡಿ ಬಿಡುವವರಿಗೆ**
**ಪಂಚಮಹಾಪಾತಕ ನರಕ ಕಾಣಾ,**
**ಕೂಡಲಸಂಗಮದೇವ**[3]

ಅನುಭವ ಮಂಟಪದಲ್ಲಿ ಎಲ್ಲರಿಗೂ ಸಮಾನ ಅವಕಾಶ ಮತ್ತು ಸ್ಥಾನ ಮಾನವಿತ್ತು, ಜಾತಿ, ಧರ್ಮ, ವರ್ಗ, ಲಿಂಗ, ಮೇಲು ಕೀಳು, ಈ ಎಲ್ಲವನ್ನು ಹೊರತು ಪಡಿಸಿ ಸಮಾನವಾದ ಲಿಂಗದೀಕ್ಷೆಯಿತ್ತು ಎಂಬುದಕ್ಕೆ ಈ ಮೇಲಿನ ವಚನದ ಆಶಯವಾಗಿದೆ. ಸ್ತ್ರೀಯನ್ನು ದೇವರ ಮತ್ತು ಧರ್ಮದ ಹೆಸರಿನಲ್ಲಿ ಆಕೆಯನ್ನು ದಾಸಿಯನ್ನಾಗಿಯೋ ಅಥವಾ ವೇಶ್ಯಯನ್ನಾಗಿಯೋ ನೋಡುವ ಅಥವಾ ಲಿಂಗರಾಜಕಾರಣ ಮಾಡುವ ಸಂದರ್ಭಕ್ಕೆ ಬಸವಣ್ಣನು ಈ ಅನಿಷ್ಠವ್ಯವಸ್ಥೆಯ ವಿರುದ್ಧ ದನಿ ಎತ್ತುವ ಅಂತಹ ಹೆಣ್ಣುಗಳಿಗೂ ಅನುಭವ ಮಂಟಪದಲ್ಲಿ ಅವಕಾಶವನ್ನು ನೀಡಿದುದು ಕಾಣಬಹುದು. ಉದಾ. ಸೂಳೆಸಂಕವ್ವ ಮೊದಲಾದ ಶರಣೆಯರನ್ನು ಗುರುತಿಸಬಹುದಾಗಿದೆ. ಒಟ್ಟಾರೆಯಾಗಿ ಬಸವಣ್ಣನು ನವಸಮಾಜದ ಹರಿಕಾರ ಎಂದರೆ ತಪ್ಪಾಗಲಾರದು, ಕಾರಣ ಬಸವಣ್ಣನ ತಾತ್ವಿಕತೆಯೂ ಸಮ ಸಮಾಜವನ್ನು ನಿರ್ಮಾಣ

ಮಾಡುವಲ್ಲಿ ಮಹತ್ತರವಾದ ಪಾತ್ರವಹಿಸಿದೆ. ಇದಕ್ಕೆ ಮುಖ್ಯ ನಿದರ್ಶನವೆಂದರೆ ಸ್ತ್ರೀಯರಿಗೆ ನೀಡಿದ ಸಮಾನತೆ ಮತ್ತು ಸ್ವಾತಂತ್ರ್ಯ ಎನ್ನಬಹುದಾಗಿದೆ.

**ಉಪಸಂಹಾರ:**

ಜಗತ್ತಿನ ಮಹಾನ್ ಮಾನವತಾವಾದಿಗಳಲ್ಲಿ ಬುದ್ಧ ಮತ್ತು ಬಸವಣ್ಣನು ಪ್ರಮುಖರಾಗಿದ್ದಾರೆ. ಇವರು ನೀಡಿದಂತಹ ಚಿಂತನೆಗಳು, ಮತ್ತು ವಿಚಾರಗಳು ಇಂದಿಗೂ ಜೀವಂತವಾಗಿವೆ ಹಾಗೂ ಪ್ರಸ್ತುತವಾಗಿವೆ. ಈ ಹಿನ್ನೆಲೆಯಲ್ಲಿ ಇದಕ್ಕೆ ಪೂರಕವಾದ ಅಂಶಗಳೆಂದರೆ ಸ್ತ್ರೀಯರನ್ನು ಕುರಿತಂತಹ ವಿಚಾರಗಳಾಗಿವೆ. ಕನ್ನಡ ಸಾಹಿತ್ಯವನ್ನು ಒಳಗೊಂಡಂತೆ ಇವರೆಗೂ ಬುದ್ಧ ಹಾಗೂ ಬಸವಣ್ಣನನ್ನು ಕುರಿತಂತೆ ಕಾವ್ಯ, ಕಥೆ, ನಾಟಕ, ವಿಮರ್ಶೆ ಮೊದಲಾದ ಸಾಹಿತ್ಯ ಪ್ರಕಾರಗಳಲ್ಲಿ ಇವರ ಚಿಂತನೆಗಳು ಜೀವಂತವಾಗಿರುವುದನ್ನು ಕಾಣಬಹುದಾಗಿದೆ.

ಪ್ರಸ್ತುತ ಈ ಲೇಖನದಲ್ಲಿ ಬುದ್ಧ ಮತ್ತು ಬಸವಣ್ಣನು ಪ್ರತಿಪಾದಿಸಿದ ಸ್ತ್ರೀ ಪರವಾದ ನಿಲುವುಗಳನ್ನು ಪ್ರಮುಖವಾಗಿರಿಸಿಕೊಂಡು, ಸ್ತ್ರೀ ಕುರಿತ ಸಮಾನತೆ, ಸ್ವಾತಂತ್ರ್ಯ ಮೊದಲಾದ ಮೌಲ್ಯಯುತ ಅಂಶಗಳನ್ನು ಇಲ್ಲಿ ಮನಗಾಣಲಾಗಿದೆ. ಒಟ್ಟಾರೆಯಾಗಿ ಬಹಳಷ್ಟು ಕಾಲಗಳಿಂದ ಅಂಧಕಾರದಲ್ಲಿ ನಲುಗಿಹೋಗಿದ್ದ ಸ್ತ್ರೀಯರ ಬದುಕನ್ನು ಬೆಳಕಿನೆಡೆಗೆ ತರುವಲ್ಲಿ ಇವರಿಬ್ಬರ ಚಿಂತನೆಗಳು ಹಾಗೂ ವಿಚಾರಗಳು ಸರ್ವಕಾಲಕ್ಕೂ ಮಹತ್ವವನ್ನು ಪಡೆದುಕೊಂಡಿವೆ ಎಂಬುದನ್ನು ಇಲ್ಲಿ ತಿಳಿಯಬಹುದಾಗಿದೆ.

## ಕೊನೆ ಟಿಪ್ಪಣಿಗಳು:

1. ಕಲಬುರ್ಗಿ ಎ.ಎಂ. (ಸಂ), (2001), ಬಸವಣ್ಣನವರ ಸಮಗ್ರ ವಚನಸಂಪುಟ, ಕನ್ನಡ ಪುಸ್ತಕಪ್ರಾಧಿಕಾರ, ಬೆಂಗಳೂರು, ಪು.ಸಂ. 216
2. ಅದೇ, ಪು.ಸಂ. 843
3. ಅದೇ, ಪು.ಸಂ. 842

## ಪರಾಮರ್ಶನ ಗ್ರಂಥಗಳು:


1. ಕಲಬುರ್ಗಿ ಎ.ಎಂ. (ಸಂ), (2001), ಬಸವಣ್ಣನವರ ಸಮಗ್ರ ವಚನಸಂಪುಟ, ಕನ್ನಡ ಪುಸ್ತಕಪ್ರಾಧಿಕಾರ, ಬೆಂಗಳೂರು.
2. ಜಗದೀಶ್ ಕೊಪ್ಪ ಎನ್., (2022), ಬುದ್ಧ ಚರಿತೆ, ಸ್ವಪ್ನ ಬುಕ್ ಹೌಸ್, ಬೆಂಗಳೂರು.
3. ಜಗದೀಶ್ ಕೊಪ್ಪ ಎನ್. (ಸಂ), (2019), ಬುದ್ಧ ಮತ್ತು ಆತನ ಧಮ್ಮ, ಪಾಲಿ ಇನ್ಸ್ ಟ್ಯೂಟ್, ಕಲಬುರಗಿ.
4. ಸೊಂದಲಗೆರೆ ಲಕ್ಷ್ಮೀಪತಿ, (2019), ಬೌದ್ಧ ಧರ್ಮದ ಅನನ್ಯತೆ, ಕಾವ್ಯಕಲಾ ಪ್ರಕಾಶನ, ಬೆಂಗಳೂರು.
5. ಶಿವನಕೆರೆ ಬಸವಲಿಂಗಪ್ಪ, (2024), ಬುದ್ಧನ ಧಮ್ಮಪದ: ಸಂಚಿಕೆ–1, ಅಭಿರುಚಿ ಪ್ರಕಾಶನ, ಮೈಸೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.